Exemption from Tree Tax on Coconut and Palm Jaggery tapping.

117. SRI M. VEERAPPA MOILY (Karkal) —Will the Minister for Labour and Excise be pleased to state :—

(*a*) whether there is any proposal before Government to order exemption from tree tax both for Coconut and Palm jaggery tapping ;

(*b*) since how long the proposal is pending before Government ?

SRI R. S. PATIL (Minister for Labour and Excise).—

(*a*) Yes.

(*b*) Since 6th January 1974.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ವಾಮಿ ಇದು ದಕ್ಷಿಣ ಕನ್ನಡ ಜಿಲ್ಲೆಯ ಸಾವಿರಾರು ಗುಡಿ ಗಾರರಿಗೆ ಸಂಬಂಧಪಟ್ಟ ವಿಚಾರ, ನನಗೆ ತಿಳಿದ ಹಾಗೆ ಮಂತ್ರಿಮಂಡಲದಲ್ಲಿ ತೆರಿಗೆ ವಿನಾಯಿತಿ ಕೊಡ ಬೇಕು ಎನ್ನುವ ಬಗ್ಗೆ ಈಗಾಗಲೇ ಒಂದು ನೋಟಿಫಿಕೇಷನ್ ಕೊಟ್ಟಿದೆ, ಆ ರೀತಿ ನೋಟಿಫಿಕೇಷನ್ ಕೊಟ್ಟ ಮೇಲೂ ಅದನ್ನು ಜಾರಿಗೆ ತರಲಿಕ್ಕೆ ಏನು ಆತಂಕವಿದೆ ಎಂಬುದನ್ನು ತಿಳಿಸುವುದಕ್ಕೆ ಆಗು ತ್ತದೆಯೇ ?

† ಶ್ರೀ ಆರ್. ಎಸ್. ಪಾಟೀಲ್.—ಅಧ್ಯಕ್ಷರೇ, ೨೬-೮-೧೯೭೭ರಲ್ಲಿ ಅಬ್ಜೆಕ್ಷನ್ ಕಾಲ್‌ಫಾರ್ ಮಾಡಿ ೧-೧೦-೧೯೭೭ಕ್ಕೆ ಕೊನೆಯ ದಿನವೆಂದು ನಿಗದಿ ಮಾಡಿದೆ, ಅದಾದ ಮೇಲೆ ಕ್ಯಾಬಿನೆಟ್‌ನಲ್ಲಿ ಒಪ್ಪಿಗೆಯಾದ ನಂತರ ವಿನಾಯಿತಿ ಕೊಡಲಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲ್ಲಾಯ.—ಸ್ವಾಮಿ ೬-೧೧-೧೯೭೪ರಿಂದ ಈ ವಿಚಾರ ತಮ್ಮ ಗಮನದಲ್ಲಿದೆ. ಅಬ್ಜೆಕ್ಷನ್ ಕಾಲ್‌ಫಾರ್ ಮಾಡಿದ್ದೀರಿ, ನೋಟಿಫಿಕೇಷನ್ ಕಾಲ್‌ಫಾರ್ ಮಾಡಿದ್ದೀರಿ, ಇನ್ನು ಎಷ್ಟು ವರ್ಷ ಇದು ಟೈಮ್ ತೆಗೆದುಕೊಳ್ಳುತ್ತದೆ ? ತಮ್ಮ ಟರ್ಮ್ ಮುಗಿಯುವ ತನಕ ಅಥವಾ ಅದು ಮುಗಿಯುವುದರೊಳಗಾಗಿ ಜಾರಿಗೆ ತರುತ್ತೀರೆ ೀ ಎಂಬುದನ್ನು ತಿಳಿಸಬೇಕು.

ಶ್ರೀ ಆರ್. ಎಸ್. ಪಾಟೀಲ್. - ೧-೧೦-೧೯೭೭ನೇ ದಿವಸ ಕೊನೆಯ ದಿವಸವಾಗಿತ್ತು ಎಂದು ಹೇಳಿದ್ದೇನೆ, ನಮ್ಮ ಟರ್ಮ್ ಮುಗಿಯುವುದರೊಳಗಾಗಿ ಮಾಡುತ್ತೀರಾ ಎಂದು ಕೇಳಿದರೆ ಹೇಗೆ ? ಅದು ಫಿನಾನ್ಸ್ ಡಿಪಾರ್ಟ್‌ಮೆಂಟಿಗೆ ಹೋಗಿ ಆದರಿಂದ ಸರ್ಕಾರಕ್ಕೆ ಎಷ್ಟು ಲುಕ್ಸಾನು ಆಗುತ್ತದೆ. ಅಥವಾ ಇಲ್ಲವೇ ಎನ್ನುವ ಬಗ್ಗೆ ಅಂಕಿ ಅಂಶಗಳನ್ನು ತರಿಸಿಕೊಂಡು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಬೇಕು. ಅದು ತೀರ್ಮಾನವಾದ ಮೇಲೆ ಸರ್ಕಾರ ಜಾರಿಗೆ ಕೊಡುತ್ತದೆ.

P.W.D. Roads in Sedam Taluk

182. SRI SHERKHAN (Sedam).—Will the Minister for Public Works be pleased to state : —

(*a*) the Number and names of the roads constructed and the roads maintained by the Public Works Department in Sedam Taluk ;

(*b*) th amount spent for those roads during the last three years ;

(*c*) the roads that have been taken up during the current year in Sedam Taluk ?

SRI S. BANGARAPPA (Minister for Public Works).—

(*a*) Eight roads of various standards have been constructed and maintained by the Public Works Department in Sedam Taluk. Details *vide* Statement I appended.

(*b*) Rs. 9.015 lakhs.

(*c*) 14 Road works as per Statement II appended-

STATEMENT I

Details of Roads taken up in Sedam Taluk-

Sl. No.	Name of the Road	Total Length in Kms.
1.	Gulbarga-Kodangal Road S.H.W.	37.20
2.	Sedam-Yadgir Road SHW (Manmarkpalli, Raichur Road).	25-70
3.	Sedam-Sulepeth Road SHW	10.20
4.	Approach Road to I. B. Mudhole MDR	1.00
5-	Ribbanpalli-Medak Road ODR	10.30
6.	Mudhole-Handerki Road V.R.	22.50
7.	Approach Road to Sedam Town V.R.	0.80
8.	Betgera to Mothakpalli on to Itkal VR to join H. B. Road.	32.80
		140.50

STATEMENT II

List of Road Works taken up during 1977-78 in Sedam Taluk under 337 Minor Works Programme.

Sl. No.	Name of the Road Works
1.	Constructing C. D. Works (7 Nos.) on Sangavi-Hebbal Road KM No. 12 to 24
2.	Improvements to Batgera-Motakpalli Road and on to Itkal Gate.
3.	Black topping Sedam-Yadgir Road.
4.	Metalling Sedam-Udgi Road.
5.	Re-surfacing Mudhole-Hunderki road KM No. 1
6.	Constructing of Minor C. D. works on Beeranhalli approach road.
7.	Re-surfacing approach road to I. B. Mudhole KM No. 1
8.	Metalling to Sangavi-Hebbal Road *via*. Kurkunda Mugnoor and Sarwar.
9.	Metalling to Sangavi-Hebbal road *via* Kurkumte KM No. 20
10.	Metalling to Sangavi-Hebbal road *via* Kurkumte KM No. 21
11.	Metalling to Sangavi-Hebbal road *via* Kurkumte KM No. 22
12.	Metalling to Sangavi-Hebbal road *via* Kurkumte KM No. 23
13.	Metalling to Sangavi-Hebbal road *via* Kurkumte KM No. 23.50.
14.	Improvements to Batagera-Motakpalli road on to Itkal joining Hyderabad-Bijapur Road.

ಶ್ರೀ ಷೇರ್‌ಖಾನ್.—(ಅ) ಪ್ರಶ್ನೆಗೆ ಉತ್ತರವಾಗಿ ೯.೦೧೫ ಲಕ್ಷ ರೂಪಾಯಿಗಳೆಂದು ಹೇಳಿದ್ದೀರಿ, ಯಾವ್ಯಾವ ರಸ್ತೆಗಳಿಗೆ ಎಷ್ಟೆಷ್ಟು ಹಣ ಖರ್ಚಾಗುತ್ತದೆ ಎನ್ನುವ ಬಗ್ಗೆ ಏನಾದರೂ ವಿವರಣೆಯನ್ನು ಕೊಡುವುದಕ್ಕೆ ಆಗುತ್ತದೆಯೇ ಸ್ವಾಮಿ?

† ಶ್ರೀ ಎಸ್. ಬಂಗಾರಪ್ಪ.—ಆ ವಿವರ ನನ್ನಲ್ಲಿ ಇಲ್ಲ. ತಾವು ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಆ ವಿವರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಷೇರ್‌ಖಾನ್.—ಆ ಮೇಲೆ (ಸಿ)ಗೆ ಉತ್ತರವಾಗಿ ೧೪ ರಸ್ತೆಗಳೆಂದು ಹೇಳಿದ್ದೀರಿ ಅದಕ್ಕೆ ಬಜೆಟ್‌ನಲ್ಲಿ ಎಷ್ಟೆಷ್ಟು ಹಣವನ್ನು ಒದಗಿಸಿದ್ದೀರಿ?

ಶ್ರೀ ಎಸ್. ಬಂಗಾರಪ್ಪ.—ಈಗ ತಃಪ್ತೆಯಲ್ಲಿ ತೋರಿಸಿರುವ ಹಾಗೆ ಯಾವುದೂ ಈ ಸಾಲಿಗೆ ಬಜೆಟ್‌ನಲ್ಲಿ ಬಂದಿಲ್ಲ. ಆದರಲ್ಲಿ ಯಾವುವು ಪ್ರಾಮುಖ್ಯವಾದ ರಸ್ತೆಗಳನ್ನು ತೆಗೆದುಕೊಂಡು ಮಾಡ ಬೇಕೆಂದು ತೀರ್ಮಾನ ತೆಗೆದುಕೊಳ್ಳುತ್ತದೆಯೋ ಅವನ್ನು ತೆಗೆದುಕೊಳ್ಳಲಾಗುತ್ತದೆ. ಒಂದು ಬೇಳೆ ಬಜೆಟ್‌ನಲ್ಲಿ ತೆಗೆದುಕೊಳ್ಳತಕ್ಕ ಕೆಲವು ಕಾಮಗಾರಿ, ಕೆಲಸಕಾರ್ಯಗಳಿದ್ದರೂ ಅದರಲ್ಲಿ ಯಾವುದು ಅತಿ

ಪ್ರಾಮುಖ್ಯವಾಗಿ ತೆಗೆದುಕೊಳ್ಳಬೇಕೋ, ಅಂದರೆ ಅದು ಯಾವುದೇ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಆಗಿರಬಹುದು, ಅಂಥಾ ರಸ್ತೆಗಳು ಆಗಬೇಕಾಗಿದೆಂದು ಮಾನ್ಯ ಸದಸ್ಯರು ತಿಳಿಸಿದರೆ ಅದರ ಬಗ್ಗೆ ಸೂಕ್ತ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂದು ಹೇಳಬಯಸುತ್ತೇನೆ.

ಶ್ರೀ ಷೇರ್‌ಖಾನ್.—ಈಗ ತಾವು ನಮ್ಮ ಏರಿಯಾ ಕಡೆಗಳೆಲ್ಲಾ ಟೂರ್ ಮಾಡಿದ್ದೀರಿ. ಅದು ಎಲ್ಲಾ ಬ್ಲಾಕ್ ಕಾಟನ್ ಸಾಯಿಲ್ ರಸ್ತೆಗಳು ಎಂಬುದು ತಮಗೆ ಗೊತ್ತಿದೆ. ಆದುದರಿಂದ ನಮ್ಮಲ್ಲಿ ಒಂದೊಂದು ರಸ್ತೆಗೂ ಸಾಮಾನ್ಯವಾಗಿ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗಿ ಬರುತ್ತದೆ.ಒಂದು ಪೇಳೆ ಅಂದಾಜು ಮಾಡಿದ್ದಕ್ಕಿಂತ ಹೆಚ್ಚಿಗೆ ಹಣವನ್ನು ಖರ್ಚು ಮಾಡಬೇಕಾಗಿ ಬರುತ್ತದೆ. ಆದುದರಿಂದ ಇದರ ಬಗ್ಗೆ ಏನಾದರೂ ತಾವು ವಿಶೇಷ ನಿರ್ಣಯವನ್ನು ತೆಗೆದುಕೊಳ್ಳುವವರಿದ್ದೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಈಗ ಒಂದು ರಸ್ತೆ ಕಾರ್ಯವನ್ನು ತೆಗೆದುಕೊಳ್ಳಬೇಕಾದರೆ ಅದರ ಬಗ್ಗೆ ಎಲ್ಲಾ ವಿವರಣೆಯನ್ನು ಸಂಬಂಧಪಟ್ಟ ಅಧಿಕಾರಿಗಳು ನೋಡಿಯೇ ಅಂದಾಜನ್ನು ತಯಾರು ಮಾಡಿರುತ್ತಾರೆ. ಅದೇ ರೀತಿ ಅಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಾರೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು ಮುಗಿದವು.

Matter under Rule 312

Re: Opening of the Shankar Mills Davangere & Mahadeva Mills Hubli.

(ಶ್ರೀ ಎಚ್.ಟಿ. ಕೃಷ್ಣಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

† ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ನಾನು ಮತ್ತು ನನ್ನ ಅನೇಕ ಮಿತ್ರರು ರೂಲ್ ೩೧೭ರ ಕೆಳಗೆ ನೋಟೀಸ್ ಕೊಟ್ಟಿದ್ದೇವೆ. ಇದರಲ್ಲಿ ವಿಷಯವಾದರೂ ಇಷ್ಟೆ ಹುಬ್ಬಳ್ಳಿ ಮಹದೇವ ಟೆಕ್ಸ್‌ಟೈಲ್ ಮಿಲ್ಸ್ ೬ ತಿಂಗಳಿಂದ ಕೆಲಸ ಮಾಡದೆ ನಿಂತಿದೆ, ಇದರ ಜೊತೆಗೆ ೪ ತಿಂಗಳಿಂದ ೧೩೦೦ ಜನ ಕಾರ್ಮಿಕರಿಗೆ ಪೇತನವಿಲ್ಲ. ಆದ್ದರಿಂದ ಕಾರ್ಮಿನಾಯಕರು ಹಾಗೂ ಕಾರ್ಮಿಕ ಪ್ರತಿನಿಧಿಗಳು ಅಧಿಕಾರಿಗಳನ್ನು ಮಂತ್ರಿಗಳನ್ನು ಮತ್ತು ಮುಖ್ಯ ಮಂತ್ರಿಗಳನ್ನು ಕಂಡಿದ್ದಾರೆ. ಜೊತೆಗೆ ಹೋದಸಾರಿ ಅಧಿವೇಶನದಲ್ಲಿ ಈ ವಿಷಯವನ್ನು ಎತ್ತಿದಾಗ ಮಾನ್ಯ ಮುಂತ್ರಿಗಳು ಇದನ್ನು ಆದಷ್ಟು ಬೇಗ ಅಂದರೆ ಒಂದು ತಿಂಗಳಿನಲ್ಲಿ ಈ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆ ಕೊಟ್ಟರು, ಆದರೆ ಸುಮಾರು ಎರಡು ತಿಂಗಳಾದರೂ ಅದರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳದೆ ಇರುವುದರಿಂದ ಕಾರ್ಮಿಕ ಮುಖಂಡರುಗಳು ಕಳೆದ ೨೫ ದಿವಸಗಳಿಂದ ಅದರ ಮುಖಂಡರುಗಳು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ನಿನ್ನೆ ದಿವಸ ವಿಧಾನಸೌದ ಮುಂದೆ ಮುಷ್ಕರ ಹೂಡಿರುವವರು ಹಾಗೂ ಕಾರ್ಮಿಕರು ಅವರ ಕಷ್ಟಸುಖಗಳನ್ನು ಹೇಳಿಕೊಳ್ಳುವುದಕ್ಕೆ ಬಂದಾಗ ಅವರನ್ನು ಅರೆಸ್ಟ್ ಮಾಡಿದ್ದು ಆಗಿದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಹಾಗೂ ಮುಂದೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಎಂದು ಸ್ಪಷ್ಟವಾದ ಉತ್ತರವನ್ನು ಹೇಳಬೇಕು. ಜೊತೆಗೆ ಇನ್ನು ನಾಲ್ಕುತಿಂಗಳ ವೇತನ ಕೊಡುವ ಬಗ್ಗೆ ಏನು ಮಾಡುತ್ತಾರೆಂದು ತಿಳಿಸಬೇಕು. ಈಗ ಹುಬ್ಬಳ್ಳಿ ನಗರದಲ್ಲಿ ವಾತಾವರಣವನ್ನು ನೋಡಿದರೆ ಹುಬ್ಬಳ್ಳಿ ಬಂದನ್ನು ಆಚರಿಸಬೇಕೆಂದು ಹೇಳುವ ಸೂಚನೆ ಕಂಡುಬರುತ್ತಿದೆ. ಆದ್ದರಿಂದ ಅಲ್ಲಿ ಆಶಾಂತಿ ಆಗುವ ಪರಿಸ್ಥಿತಿ ಇದೆ.

ಇನ್ನು ದಾವಣಗೆರೆ ಶಂಕರ್ ಟೆಕ್ಸ್‌ಟೈಲ್ಸ್ ಮಿಲ್ಸ್ ಬಗ್ಗೆ ಮಾನ್ಯ ಪಂಪಾಪತಿಯವರು ಹೇಳಿದನ್ನು ನೋಡಿದರೆ ತಾವು ಅರ್ಥಮಾಡಿಕೊಳ್ಳಬೇಕು. ಅಲ್ಲಿನ ಕಾರ್ಮಿಕರ ಪರಿಸ್ಥಿತಿಯನ್ನು ನೋಡಿದರೆ ಬಹಳ ಚಿಂತಾಜನಕವಾಗಿದೆ. ಅದರ ಮೇಲೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳ ಬೇಕಾಗುತ್ತದೆ. ಹಿಂದೆ ಯೆಲ್ಲಾ ಸಿಕ್ ಮಿಲ್ಸ್‌ಗಳನ್ನು ಸರ್ಕಾರವೇ ತೆಗೆದುಕೊಳ್ಳುವುದೋ ಅಥವಾ ಅದಕ್ಕೆ ಹಣಸಹಾಯ ಮಾಡುವುದೋ ಒಂದು ರೂಪದಲ್ಲಿ ಸಹಾಯ ಮಾಡುತ್ತಾ ಬಂದಿದೆ. ಆದ್ದರಿಂದ ಅದೇ ರೀತಿ ಈಗಲೂ ಕೂಡ ತಡಮಾಡದೆ ಈ ಸಮಸ್ಯೆಗಳನ್ನು ತೀವ್ರವಾಗಿ ಗಣನೆಗೆ ತೆಗೆದುಕೊಂಡು ಬಗೆಹರಿಸಬೇಕೆಂದು ಹೇಳುತ್ತೇನೆ. ಕೂಡಲೇ ಆ ರೀತಿ ಬಗೆಹರಿಸದೆ ಹೋದರೆ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದೆ ಎಂದು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.